As per modified SOP of our Hon'ble High Court dated 28-08-2021 Witness called and duly sworn on 10-11-2021 and after confirming that he is not suffering from any symptoms of Covid-19 permitted to face cross examination by the counsel for defendants No.4(c) physically.

**ಪಾಟೀ ಸವಾಲು : 4 ಸಿ ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದ :**

1. ನಾನು ಬಿಬಿಎ ವರೆಗೂ ಓದಿರುತ್ತೇನೆ. ನನಗೆ ಕನ್ನಡ ಮತು ಇಂಗ್ಲೀಪ್ ಓದಲು ಬರುತ್ತದೆ. ನನ್ನ ತಾಯಿ ಓದಿರುತ್ತಾರೆ. ಆದರೆ ಏನು ಓದಿರುತ್ತಾರೆ ನೆನಪಿಲ್ಲ. ಅವರಿಗೆ ಕನ್ನಡ ಬರುತ್ತಿರಲಿಲ್ಲ. ಇಂಗ್ಲೀಷ್ ಸ್ವಲ್ಪ ಬರುತ್ತಿತು. ದಾವಾ ಸ್ವತ್ತನ್ನು ಕೊಂಡುಕೊಳ್ಳುವಾಗ ನಾನು ಮತ್ತು ನನ್ನ ಮಾವ ಮಾತುಕತೆ ಮಾಡುವಾಗ ಹಾಜರಿದ್ದೆವು. ನನ್ನ ತಾಯಿ ಕೂಡ ಇದ್ದರು. ಆಗ ನನ್ನ ವಯಸ್ಸು 35-40 ವರ್ಷ. ಡಾಕ್ಟರ್ ಗಜೇಂದ್ರ ರವರ ಜೊತೆ ಮಾತುಕತೆ ಆಗಿರುತ್ತದೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಗಜೇಂದ್ರ ರವರ ಜೊತೆ ಮಾತ್ರ ಮಾತುಕತೆ ಆಗಿರುತ್ತದೆ. ಮಾತುಕತೆ ಸಂದರ್ಭದಲ್ಲಿ ಗಜೇಂದ್ರ ರವರ ಜಿಪಿಎ, ಕೃಷ್ಣಪ್ಪ ಮತ್ತು ಅವರ ಮೂರು ಮಕ್ಕಳ ಎನ್.ಓ.ಸಿ ದಾಖಲೆಗಳನ್ನು ನೋಡಿರುತ್ತೇನೆ.

2. ದಾಖಲೆಗಳನ್ನು ಪಡೆದು ನನ್ನ ಸಂಬಂಧಿ ಶ್ಯಾಮಕುಮಾರ್ ರವರು ವಕೀಲರಿಂದ ಸಲಹೆ ಪಡೆದಿರತ್ತಾರೆ. ಆದರೆ ಬರವಣಿಗೆಯಲ್ಲಿ ಪಡೆದಿರುವುದಿಲ್ಲ. ದಾವಾ ಸ್ವತ್ತನ್ನು ನೋಡಿದ್ದೆನು. ನಾವು ಕ್ರಯಕ್ಕೆ ಪಡೆದಾಗ ಖಾಲಿ ಇತ್ತು ಹಾಗೂ ಒಂದು ಚಿಕ್ಕ ಶೆಡ್ ಇತ್ತು. ಸದರಿ ನಿವೇಶನ ಉತ್ತರಾಭಿ ಮುಖವಾಗಿ ಇತ್ತು. ಗಜೇಂದ್ರ ರವರು ಕೃಷ್ಣಪ್ಪನವರಿಂದ ಪಡೆದಿದ್ದರು. ಆ ಬಗ್ಗೆ ಜಿಪಿಎ ಆಗಿರುತ್ತದೆ.

ಕೃಷ್ಣಪ್ಪನವರಿಗೆ ದಾವಾ ಆಸ್ತಿ ಸರ್ಕಾರದಿಂದ ಬಂದಿರುತ್ತದೆ. ಆ ಬಗ್ಗೆ ಹಕ್ಕುಪತ್ರ ನೋಡಿರುತ್ತೇನೆ.

ಹೆಚ್ಚಿನ ಪಾಟೀ ಸವಾಲನ್ನು ಸಮಯದ ಅಭಾವದಿಂದ ವಿನಂತಿ ಮೇರೆಗೆ ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .